# ಪವಿತ್ರ ನಡಿಗೆ

## "The Inner Journey"

Hansini Bheema

BlueRose ONE.com
Stories Matter
NewDelhi • London

**BLUEROSE PUBLISHERS**
India | U.K.

Copyright © Hansini Bheema 2026

All rights reserved by author. No part of this publication may be reproduced, stored in a retrieval system or transmitted in any form or by any means, electronic, mechanical, photocopying, recording or otherwise, without the prior permission of the author. Although every precaution has been taken to verify the accuracy of the information contained herein, the publisher assumes no responsibility for any errors or omissions. No liability is assumed for damages that may result from the use of information contained within.

BlueRose Publishers takes no responsibility for any damages, losses, or liabilities that may arise from the use or misuse of the information, products, or services provided in this publication.

BlueRose ONE.com
Stories Matter
NewDelhi • London

For permissions requests or inquiries regarding this publication, please contact:

BLUEROSE PUBLISHERS
www.BlueRoseONE.com
info@bluerosepublishers.com
+91 8882 898 898
+4407342408967

ISBN: 978-93-7825-192-4

First Edition: April 2026

# ಸೂಚ್ಯಂಕ

ಧೈರ್ಯ ........ 1
ಹೇಯ್ ತಾಯಿ! ಈ ಕವಿತೆ ನಿಮಗಾಗಿ, ನನ್ನ ಹೃದಯದ ಸ್ವರ ನಿಮಗಾಗಿ! ..... 3
ದೀಪದ ದಾರಿ ........ 5
ಸಾಗರ ........ 7
ಕಲ್ಲು ........ 9
ಮಿಂಚು ಹುಲ ........ 11
ಪಾರಿವಾಳ ........ 13
ಮಾವಿನ ಮರ ........ 15
ಅಳಿಲು ........ 17
ಪಾರಿಜಾತ ........ 19
ಜಿಂಕೆ ........ 20
ನವಿಲು ........ 21
ಅಪ್ಪ ........ 23
ಆನಂದದ ಸಂಜೆ ........ 25
ದಾಸವಾಳ ........ 27
ಚಂದ್ರಪ್ರಕಾಶ ........ 29
ಚುರುಕು ಮನಸ್ಸು ........ 31
ಮರ ........ 33
ಜೆನುಹುಳ ........ 35
ಬೆಟ್ಟ ........ 37

ಸಮುದ್ರ ........................................................................39

ಜಲಪಾತ........................................................................41

ಸಮಯ ........................................................................43

ಹಂಪಿ........................................................................45

ಕಹಿ ........................................................................49



# ಧೈರ್ಯ

ಮಧುರವಾಗಿರುವ ಹೂವಿನಂತೆ
ಸುಗಂಧದ ಪರಿಮಳದಂತೆ
ಚುಕ್ಕೆ ಚುಕ್ಕೆಗಳ ಬಣ್ಣದ ಮೇಲೆ
ಹಾರುತ್ತಾ ಹಾರುವ ಚಿಟ್ಟೆ ನೀನು

ಸೂರ್ಯನಂತೆ ಕಾಂತಿ ನಿನ್ನದು
ಚಂದ್ರನಂತೆ ಶಾಂತಿ ನಿನ್ನದು
ನಕ್ಷತ್ರಗಳ ಮಿನುಗು ನಿನ್ನದು
ಆಕಾಶದ ಬಣ್ಣ ನಿನ್ನದು

ಹೆದರುವೆ ಏಕೆ ?
ಹೆದರುವೆ ಏಕೆ
ಕೊಮಲವಾಗಿ ಮನಸಿರುವ ನಿನ್ನು
ಹೆದರುವೆ ಏಕೆ ?

ಸಾಗರದಂತೆ ವಿಶಾಲ ಮನಸ್ಸು
ಅಲೆಗಳಂತೆ ಸಮಸ್ಯೆಗಳಿರಲಿ
ಹೆದರುವೆ ಏಕೆ ನನ್ನ ಪ್ರಿಯೆ

ಧೈರ್ಯವ ಮುಡಿಸು ಕೊ, ನನ್ನ ಪ್ರಿಯೆ
ನಿನ್ನ ಜೀವನ ಹಾಗೆ ಅದ್ಭುತವಾಗುವುದು, ನನ್ನ ಪ್ರಿಯೆ......



# ಹೇಯ್ ತಾಯಿ! ಈ ಕವಿತೆ ನಿಮಗಾಗಿ, ನನ್ನ ಹೃದಯದ ಸ್ವರ ನಿಮಗಾಗಿ!

ಸುಂದರವಾಗಿರುವ ವನ ನಿನ್ನದು

ಸುಂದರವಾಗಿರುವ ಕಣ್ಣು ನಿನ್ನದು

ಚಿಕ್ಕ ಗುಡಿಸಿಲಿನಲ್ಲಿ ಇರುವೆ ನೀನು

ಎಲ್ಲರ ಮನಸನ್ನು ಸೆರುವೆ ನೀನು

ನನ್ನೊಡನೆ ಧೈರ್ಯವ ತುಂಬುವೆ ನೀನು!

ನನಗಾಗಿ ಶಕ್ತಿ ನೀಡುವೆ ನೀನು!

ನನಗಾಗಿ ನೀವೇ ಪ್ರೀತಿ ಕಲಿಸುವಿರಿ,

ನನ್ನ ಪ್ರೀತಿಯ ತಾಯಿ!

ಅಗ್ನಿಯ ಧಾತಿ, ಅಲೆಗಳ ಧಾತಿ, ಜ್ವಾಲೆಯಲ್ಲಿ

ಹೊರಾಡುವಿರಿ ನೀವು!

ನನ್ನ ಖುಷಿಯನ್ನು ನೋಡಲು ಬಯಸುತ್ತಾ

ಕಳೆದು ಹೋಗುವಿರಿ, ನಿನ್ನನ್ನು ಮರೇತು!

ನಿಮ್ಮ ಕೈಯನ್ನ ಪ್ರಸಾದ ತಿನ್ನುವ ಆಸೆ

ನಿಮ್ಮ ಮಡಿಲಲ್ಲಿ ಮಲಗುವ ಆಸೆ  ನಿಮ್ಮ ನೆರಳಲ್ಲಿ ಇರಲು ಆಸೆ

ಕ್ಷಣ ಕ್ಷಣವು ನೀವೇ, ಕನಸಲ್ಲಿ ನೀವೇ

ನೀವೇ ನನ್ನ ಸರ್ವಸ್ವ ತಾಯಿ...



# ದೀಪದ ದಾರಿ

ಕತ್ತಲಿನಲ್ಲಿ ಬೆಳಗುವ ದೀಪ ನೀನು
ಕತ್ತಲಿನಲ್ಲಿ ಜೀವಿಸುವ ಕಾಂತಿ ನೀನು
ಗುಹೆ ಒಳಗಿನ ಮಿಂಚು ನೀನು,
ಗುಹೆಯಲ್ಲಿ ಜೀವಿಸುವ ಧೈರ್ಯ ನೀನು

ಅಂಧಕಾರದ ಕತ್ತಲು ನೀನೆ,
ಅಂಧಕಾರದ ಬೆಳಕು ನೀನೆ,
ಹೃದಯದ ಭಯ ನೀನೆ,
ಹೃದಯದ ಧೈರ್ಯ ನೀನೆ

ಹೆದರುವೆ ಯಾರಿಗೆ? ಹೆದರುವೆ ಏಕೆ?
ಹೆದರುವೆ ಯಾರಿಗೆ? ಹೆದರುವೆ ಏಕೆ?

ಧೈರ್ಯ ನಿನ್ನ ಸ್ನೇಹಿತ,
ಧೈರ್ಯ ನಿನ್ನ ಖುಷಿ
ಅದನ್ನು ಮುಡಿಸು, ನನ್ನ ಪ್ರಿಯೆ

ನನ್ನ ಪ್ರೀತಿಯ ಹೃದಯ
ಎಂದೆಂದಿಗೂ ಇರುವೇ ಧೈರ್ಯವಾಗಿ!




# ಸಾಗರ

ಶಾಂತಿಯ ಸಾಗರ,
ಹೊಳೆಯುವ ಸಾಗರ,
ಚಂದ್ರನ ಬಿಂಬ ನಿನ್ನಲ್ಲಿ ಕಾಣಿಸುವುದು,
ಮನಸ್ಸಿನ ತೃಪ್ತಿ ನಿನ್ನಿಂದ ಪಡೆಯುವೆ

ಗಾಳಿಯೆ ಇರಲಿ, ಬಿಸಿಲೆ ಇರಲಿ,
ಮಳೆ ಇರಲಿ, ಚಳಿಯೆ ಇರಲಿ
ನೀನು ಇರುವೆ ಸ್ಥಿರವಾಗಿ,
ನೀನು ಇರುವೆ ಶಾಂತಿಯಾಗಿ

ನಿನ್ನಿಂದ ಬೆಳೆದ ಹೂವು, ಅದೃಷ್ಟ
ನಿನ್ನಲ್ಲಿ ಇರುವ ಜೀವಿ, ಅದೃಷ್ಟ
ನಿನ್ನನ್ನು ಕುಡಿಯುವ ಜೀವಿ, ಸೌಭಾಗ್ಯ
ನಿನ್ನಿಂದ ಕಲಿಯುವ ಜೀವಿ ಸೌಭಾಗ್ಯ...

ನೀನು ಕಲಿಸುವೆ ಶಾಂತಿಯ ಪ್ರೀತಿ,
ನೀನು ಕಲಿಸುವೆ ಶಾಂತಿಯ ಸ್ಥಿರ
ನಿನ್ನ ಸೌಂದರ್ಯ ತಾಯಿಯ ಕಣ್ಣಿನ ಹಾಗೆ,
ನಿನ್ನ ಸದ್ದು ತಾಯಿಯ ಹೃದಯದ ಸ್ಪರ್ಶದ ಹಾಗೆ...
ಈ ರಾತ್ರಿ ನನ್ನ ಹೃದಯದಲ್ಲಿ ಇರುವೆ ನೀನು, ಎಂದೆಂದಿಗೂ ಇರುವೆ,
ಎಂದೆಂದಿಗೂ ಕಲಿಸು ಈ ಶಾಂತಿಯನ್ನು ...



# ಕಲ್ಲು

ವಿಚಿತ್ರವಾದ ಆಕಾರ,
ವಿಚಿತ್ರವಾದ ಬಣ್ಣ,
ಬೆಟ್ಟ ಗುಡ್ಡೆಗಳಲ್ಲಿ ಇರುವೆ ನೀನು
ಜುಳು ಜುಳು ಎನ್ನುವ ನದಿಯಲ್ಲಿ ನೀನು

ಆಕಾರವನ್ನು ಸೃಷ್ಟಿಸುವೆ ನೀನು
ಮೂರ್ತಿಯನ್ನು ಸೃಷ್ಟಿಸುವೆ ನೀನು,
ನಿನ್ನನ್ನು ಪೂಜಿಸುವ ಜನರು ನಾವು,
ನಿನ್ನಿಂದ ಕಲಿಯುವ ಜನರು ನಾವು

ನಿನ್ನ ಸ್ಪರ್ಶ ಕಹೀ ಇದ್ದರು,
ನಿನ್ನ ಹೃದಯ ಸಿಹಿ
ಎಂತಹ ಪ್ರಳಯ ವಿರಲಿ
ತಡೆಯುವ ಶಕ್ತಿ ನಿನ್ನದು

ನನಗೆ ನಿನ್ನ ಶಕ್ತಿಯನ್ನು ಕಲಿಸು,
ನನಗೆ ನಿನ್ನ ಸ್ಥಿರವನ್ನು ಕಲಿಸು.......



# ಮಿಂಚು ಹುಳ

ಚುಕ್ಕಿಗಳ ಹಾಗೆ ಕಾಣಿಸುವೆ ನೀನು,
ಮಿಂಚುತ ಮಿಂಚುತ ವನದಲ್ಲಿ
ಪುಟ್ಟ ಸೂರ್ಯನು ನೀನು, ಈ ಕತ್ತಲಲ್ಲಿ;
ಪುಟ್ಟ ಕಾಂತಿ ನೀನು, ಈ ಮನದಲ್ಲಿ

ಚಿಕ್ಕದಾದರೂ ಪ್ರಕಾಶ ನೀನು,
ಕತ್ಥಲ್ಲಿದ್ದರು ಹೊಳಪು ನೀನು
ಕಟ್ಟಿ ಹಾಕಿದ್ದರೆ ಸಾಯುವೆ ನೀನು,
ಬಿಡಿಸಿದರೆ ಹೊಳೆಯುವೆ ನೀನು

ಕಲಿಸುವೆಯಾ ನನಗೆ, ನಿನ್ನ ಬುದ್ಧಿ
ತಿಳಿಯುವೆ ಇಂದೂ ಈ ಸುಧಿ...



# ಪಾರಿವಾಳ


ಪಂಜರದಲ್ಲಿ ಇರುವೆಯಾ ನೀನು?
ಪಂಜರವೇ ನಿನ್ನ ಜೀವನವೇ?
ಹೊರಗೆ ಬಾ ನನ್ನ ಪಾರಿವಾಳ!
ಹೊರಗೆ ಬಾ ನನ್ನ ಪಕ್ಷಿ!

ಹೊರಗೆ ಕಾಣಿಸುವುದು, ನಿನ್ನ ಖುಷಿ
ಆದರೆ ತಿಳಿದಿದೆಯೆ, ನಿನ್ನ ಮನದ ದುಃಖ
ಹೊರಗೆ ಬಾ! ನನ್ನ ಪಾರಿವಾಳ
ಹೊರಗೆ ಬಾ! ನನ್ನ ಪಕ್ಷಿ!

ಆಕಾಶವು ಇರುವುದು ವಿಶಾಲವಾಗಿ,
ಗಾಳಿಯು ಇರುವುದು ತಂಪಾಗಿ,
ಸಂಜೆ ಸಮಯ, ಸೂರ್ಯ ಚಂದ್ರರು ಜೊತೆಯಲ್ಲಿ

ಎಷ್ಟು ದಿನ ಇರುವೆ ನೀ ಒಳಗೆ?
ನಿನ್ನ ಮನದ ಕಲ್ಮಶವನ್ನು ತೆಗೆ
ತಿಳಿಯುವುದು, ನಿನಗೆ ಈ ಅನುಭವ
ಹೊರಗೆ ಬಾ! ನನ್ನ ಪಾರಿವಾಳ ಹೊರಗೆ ಬಾ! ನನ್ನ ಪಕ್ಷಿ

ರೆಕ್ಕೆಯ ಬಿಚ್ಚಿ ಹಾರುವೆಯಾ? ಆಕಾಶದಿಂದ ನಕ್ಷತ್ರಗಳ ವರಿಗೂ
ಹಾರುವೆಯಾ ಪಕ್ಷಿ? ಹಾರುವೆಯಾ ಪಕ್ಷಿ! ಹೊರಗೆ ಬಾ ನನ್ನ ಪ್ರಿಯೆ!



# ಮಾವಿನ ಮರ

ಎತ್ತರವಾದ ಮಾವಿನ ಮರ,
ಸುಂದರವಾದ ಮಾವಿನ ಮರ;
ಇರುವುದು ನನಗೆ ನಿನ್ನ ನೆನಪು,
ಇರುವುದು ನನಗೆ ನಿನ್ನ ಸಂತೋಷ

ಚಿಕ್ಕಂದಿನಿಂದಲೂ ಆಡಿದೆವು ನಿನ್ನ ಜೊತೆಗೆ,
ಚಿಕ್ಕಂದಿನಿಂದಲೂ ಪಡೆದೇವೂ ನಿನ್ನ ನೆರಳು;
ನಿನ್ನನ್ನು ಹತ್ತುತ್ತ, ನಿನ್ನ ಫಲವನ್ನು ತಿನ್ನುತ್ತ,
ಸಿಗುವುದು ನಮಗೆ ಈ ಖುಷಿ

ನಿನ್ನಲ್ಲಿ ಗೂಡು ಕಟ್ಟಿದವು ಪಕ್ಷಿಗಳು,
ನಿನ್ನ ನೆರಳಲ್ಲಿ ಬೆಳೆದೇವು ನಾವು,
ನಿನ್ನ ಜೊತೆಗೆ ಆಡಿದೆವು ವಿಧವಿಧ ಆಟಗಳು,
ನಿನ್ನ ಜೊತೆಯಿರುವುದು ಈ ಸುಂದರ ಸ್ನೇಹ

ಬೇಕೆ! ನಿನಗೆ ಮತ್ತೇ ಈ ನೆನಪು!
ಬೇಕೆ! ನಿನಗೆ ಮತ್ತೇ ಈ ಹೊಳಪು
ಕೊಡಿಸುವೆ ನಾ! ನನ್ನ ಸ್ನೇಹಿತ,
ಆದರೆ ಮರೆಯಬೇಡ ಈ ಪುಟ್ಟಿಯನ್ನು!



# ಅಳಿಲು

ನನ್ನ ಪುಟ್ಟ ಅಳಿಲು,
ನನ್ನ ಮುದ್ದು ಅಳಿಲು,
ಬಚ್ಚಿಟ್ಟು ಕೊಳ್ಳುವೆಯಾ ಮರದೊಳಗೆ,
ಬಚ್ಚಿಟ್ಟು ಕೊಳ್ಳುವೆಯಾ ಗಿಡದಲ್ಲಿ

ಹಣ್ಣನ್ನು ತಿನ್ನುವೆ ನಿಶಬ್ದವಾಗಿ,
ನೀರನ್ನು ಕುಡಿಯುವೆ ನಿಶಬ್ದವಾಗಿ,
ಒಮ್ಮೊಮ್ಮೆ ಮಾಡುವೆ ಶಬ್ದಗಳು ಮರದಲ್ಲಿ,
ಮತ್ತೊಮ್ಮೆ ಮಾಡುವೆ ಸಾಹಸಗಳು ಮರದಲ್ಲಿ

ಚಿಕ್ಕ ರೂಪವಾದರೂ ದೊಡ್ಡ ಸಾಹಸ,
ಚಿಕ್ಕ ಕಣ್ಣಾದರೂ ದೊಡ್ಡ ಪ್ರಪಂಚ,
ಮೂರು ಗೆರಗಳು ಮೃದುವಾದ ಚರ್ಮದ ಮೇಲೆ,
ಮೃದು ಬಾಲ ಅರ್ಧ ಚಕ್ರದಲ್ಲಿ

ಇರುವುದು ಕೈ ಮನುಷ್ಯನ ಹಾಗೆ,
ಇರುವುದು ಕಾಲು ಮನುಷ್ಯನ ಹಾಗೆ,
ನನಗೆ ಖುಷಿ ಆಗುವುದು ನಿನ್ನ ಆಟ,
ತರುವದು ಈ ಸುಂದರ ನೋಟ.......



# ಪಾರಿಜಾತ

ಇರುವೆಯು ನೀನು ಕೋಮಲವಾಗಿ,
ಇರುವೆಯಾ ನೀನು ಪವಿತ್ರವಾಗಿ,
ನಿನ್ನ ಸುವಾಸನೆಯು ಇರುವುದು ಸುಗಂಧವಾಗಿ,
ನೀನು ಇರುವೆಯು ಸುಂದರವಾಗಿ

ರಾತ್ರಿ ಹೊತ್ತಲ್ಲಿ ಬೆಳಗುವೆ ನೀನು,
ಸೂರ್ಯಾಸ್ತದಲ್ಲಿ ಮುಳುಗುವೆ ನೀನು,
ನಿನ್ನ ಬಿಳಿ ಬಣ್ಣ ಕಾಣಿಸುವುದು ಚಂದ್ರನ ಹಾಗೆ,
ಒಳಗಿರುವ ಕೆಸರಿ ಕಾಣಿಸುವುದು ಸೂರ್ಯನ ಹಾಗೆ

ನಿನ್ನ ಪರಿಮಳ ಬರುವುದು ಮನೆ ಮನೆಯಲ್ಲೂ,
ನಿನ್ನ ಪರಿಮಳ ಬರುವುದು ಮನ ಮನದಲ್ಲೂ,
ಕಾಣಿಸುವೆ ನೀನು ತಂಪಾಗಿ, ಇರುವೆ ನೀನು ಚೆಂದಾಗಿ

ನಿನ್ನಲ್ಲಿ ಕಾಣಿಸುವುದು ಚಂದ್ರನ ಶಾಂತಿ,
ನಿನ್ನಲ್ಲಿ ಕಾಣಿಸುವುದು ಸೂರ್ಯನ ಕಾಂತಿ,
ತೇಲುತ್ತ ತೇಲುತ್ತ ನೀರಿನಲ್ಲಿ,
ಸುಗಂಧವನ್ನು ಕಂಪಿಸುವೆ ನೀರಲ್ಲೂ

ಇರು ಹೀಗೆ ಸುಂದರವಾಗಿ,
ಇರು ಹೀಗೆ ಶುದ್ಧವಾಗಿ,
ಎಂದೆಂದಿಗೂ ಇರುವೆ ಮನದಲ್ಲಿ, ಬೆಳಸುವೆ ಈ ಪ್ರೀತಿಯನ್ನು...

# ಜಿಂಕೆ

ಬಂಗಾರ ಬಣ್ಣದ ಜಿಂಕೆ,
ಚುಕ್ಕಿ ಚುಕ್ಕಿಗಳ ಜಿಂಕೆ ನೀನು,
ಹೂವಿನಂತೆ ಇರುವ ನಿನ್ನ ನಯನ
ಚಿಕ್ಕ ಬಾಲ ನಿನ್ನದ್ದು

ನಿನ್ನ ರೂಪದ ಹಾಗೆ ನಿನ್ನ ಹೃದಯ,
ನಿನ್ನನ್ನು ಹಿಡಿಯಲು ಹೋದೆ ನಾ...
ಹೊಲದಲ್ಲಿ ಚಿಗುರುತ್ತ, ಹಾರುತ್ತ ಓಡುವೆ ನೀನು,
ಕ್ಷಣದಲ್ಲಿ ಮಾಯವಾಗುವೆ ನೀನು

ಕುಡಿಯುವೆ ನೀರು ಎಚ್ಚರದಲ್ಲಿ,
ತಿನ್ನುವೆ ಜೋಳ ಎಚ್ಚರದಲ್ಲಿ,
ಗುಂಪಿನಲ್ಲಿ ಇರುವೆ ನೀನು,
ಗುಂಪಿನಲ್ಲಿ ಬೆಳೆದಿರುವೆ ನೀನು

ಕೊಂಬುಗಳು ಕಾಣಿಸುವುದು ಶಾಖೆಗಳ ಹಾಗೆ,
ಪುಟ್ಟ ಕಾಲು ದೊಡ್ಡ ಹೆಜ್ಜೆ
ಜಿಗಿಯುತ್ತ, ಜಿಗಿಯುತ್ತ ಬಾಳುವೆ ನೀನು,
ಜಿಗಿಯುತ್ತ ಬಾಳು ನನ್ನ ಜೊತೆಗೆ.

# ನವಿಲು

ನೀನಿರುವೆ ಬಹು ಸುಂದರ,
ನೀನಿರುವೆ ಬಹು ಚಂದಿರ
ನೀಲಿ ಬಣ್ಣದ ಕತ್ತು ನಿನ್ನದು,
ಉದ್ದವಾಗಿರುವ ಪುಕ್ಕೆ ನಿನ್ನದು

ಮಳೆಯಲ್ಲಿ ನೀನು ನಾಟ್ಯ ಮಾಡುವೆ,
ಕುಣಿಯುತ್ತ ಕುಣಿಯುತ್ತ ಮಳೆಯಲ್ಲಿ
ಚುರುಕಾಗಿರುವ ನಯನ ನಿನ್ನದು,
ಚೂಪಾಗಿರುವ ಬಾಯಿ ನಿನ್ನದು

ನಿನ್ನ ಗರಿ ಇರುವುದು ಬಣ್ಣ ಬಣ್ಣ,
ನಿನ್ನ ಗರಿ ಕಾಣಿಸುವುದು ಭೂಮಿಯ ಹಾಗೆ,
ನಿನ್ನ ರೂಪ ಕಾಣಿಸುವುದು ಸುಂದರವಾಗೆ

ನಿನ್ನ ಗರಿಯನ್ನು ಬಿಚ್ಚಿ, ನಾಚುತ ನಾಚುತ,
ಖುಷಿಯಿಂದ ಆಡು ನನ್ನ ನವಿಲು...........



# ಅಪ್ಪ

ನನ್ನ ಪ್ರೀತಿಯ ಅಪ್ಪ,
ನನ್ನ ಮೆಚ್ಚಿನ ಅಪ್ಪ,
ನಿಮ್ಮ ನೆರಳಲ್ಲಿ ಬೆಳೆದ ನಾ!
ನಿಮ್ಮ ಜೊತೆಗೆ ಇರುವೆ ನಾ!

ನಿಮ್ಮನ್ನು ನೋಡಿ ಕಲಿಯುವೆ ನಾ,
ನಿಮ್ಮಿಂದ ಕಲಿತೇ ನಾ
ನಿಮ್ಮ ಖುಷಿ ನನ್ನದು ಅಪ್ಪ, ಖುಷಿಯಿಂದ ಇರು ನನ್ನ ಅಪ್ಪ

ಆಕಾಶದ ಹಾಗೆ ನಿಮ್ಮ ಮನಸ್ಸು,
ಹೂವಿನ ಹಾಗೆ ನಿಮ್ಮ ಹೃದಯ
ಅಗ್ನಿಯ ದಾಟಿ, ಅಲೆಗಳ ದಾಟಿ,
ಜ್ವಾಲೆಯ ದಾಟಿ ಬರುವಿರ ಅಪ್ಪ

ನನ್ನ ತಪ್ಪುಗಳನ್ನು ಕ್ಷಮಿಸುವಿರಾ ಅಪ್ಪ,
ನನ್ನ ನೋವನ್ನು ತಾಳಲಾರೆ ಅಪ್ಪ
ನಿಮ್ಮ ಧೈರ್ಯ ನನಗೆ ಕೊಡುವಿರಾ, ನಿಮ್ಮ ಪ್ರೀತಿ ನನಗೆ ಕೊಡುವಿರಾ

ನಿಮ್ಮ ಕೂಪವ ನೋಡಿ ತಾಳಲಾರೆ ನಾ!
ನಿಮ್ಮ ನೋವನ್ನು ನೋಡಿ ತಾಳಲಾರೆ ನಾ!
ನಿಮ್ಮ ಜೊತೆಗೆ ಇರುವುದೇ ನನ್ನ ಆಸೆ,
ನಿಮ್ಮ ಮುಗುಳನಗೆ ನೋಡುವುದೇ ನನ್ನ ಆಸೆ!



# ಆನಂದದ ಸಂಜೆ

ಹೀಗೆ ಈ ಕವಿತೆ ಬರೆಯುತಿರುವೆ,
ಹೀಗೆ ಈ ಸುಂದರ ವನದಲ್ಲಿ
ಸಂಜೆಯ ಸಮಯವು,
ನಿಶಬ್ದದ ಸಮಯವು

ತಂಪಾದ ಗಾಳಿಯು ಬೀಸುತ್ತಿದೆ,
ಚಿಲಿಪಿಲಿ ಪಕ್ಷಿಗಳು ಹಾರುತ್ತಿವೆ,
ಆಕಾಶವು ಮೋಡಗಳಿಂದ ತುಂಬಿದೆ,
ಮಣ್ಣಿನ ಸುಗಂಧವು ತುಂಬಿದೆ

ಬಣ್ಣ ಬಣ್ಣದ ಹೂವಗಳಲ್ಲಿ,
ಬಣ್ಣ ಬಣ್ಣದ ಕೀಟಗಳಲ್ಲಿ,
ನಿಶಬ್ದದ ಸ್ವರವಿದು,
ನಿಶಬ್ದದ ಗಾಳಿಯಿದು

ಶಾಂತಿಯ ತೋಟವು,
ಸುಂದರ ನೋಟವು,
ಕಣ್ಣಿಗೆ ಕಾಣಿಸುವುದು ಬಹು ಚಂದ;
ಬಣ್ಣ ತುಂಬುವ ಚಿಟ್ಟೆಗಳು,
ಬಣ್ಣ ಹರಡಿಸುವ ಇರುವೆಗಳು

ಸುಂದರ ಆಶ್ವಾಸನೆ, ಸುಂದರ ಅನುಭವ
ಇರಲಿ ನನಗೆ ಎಂದೆಂದಿಗೂ.............



# ದಾಸವಾಳ

ಬಣ್ಣ ಬಣ್ಣದ ದಾಸವಳ,
ಸುಂದರವಾದ ದಾಸವಳ,
ಕೋಮಲವಾದ ದಾಸವಳ,
ಸುಗಂಧದ ದಾಸವಳ

ಪೂಜೆಗೆ ಅರ್ಪಿಸುವ ದಾಸವಳ,
ದೊಡ್ಡ ಆಕಾರವಿರುವ ದಾಸವಳ;
ಮಳೆ ಇರಲಿ, ಚಳಿ ಇರಲಿ,
ಬಿಸಿಲಿರಲಿ, ಗಾಳಿ ಇರಲಿ

ನೀ ಚಿಗಿರುವೇ ಎಲ್ಲ ಸಮಯದಲ್ಲೂ,
ನೀ ಇರುವೆ ಎಲ್ಲ ಸಮಯದಲ್ಲೂ;
ನಿನ್ನ ಸ್ಪರ್ಶವು ಕೋಮಲ,
ನಿನ್ನ ಕೋಮಲವೇ ನನ್ನ ಹರಷ.....



# ಚಂದ್ರಪ್ರಕಾಶ


ಪೂರ್ಣಿಮದಿಂದು,
ರಾತ್ರಿಯುದಿಂದು
ಚಂದ್ರನು ಹೊಳೆಯುತ್ತಿರುವನು,
ಚಂದ್ರನು ಹೊಳೆಯುತ್ತಿರುವನು

ಮಣ್ಣಿನ ಕಂಪು, ಹೂವಿನ ಸಂಪು,
ಗಾಳಿಯ ತಂಪು; ಅವನ ಹೊಳಪು
ಆಕಾಶವೇ ಮಿನುಗುತ್ತಿದೆ,
ಆಕಾಶವೇ ಹೊಳೆಯುತ್ತಿದೆ

ಬೆಳ್ಳಿ ಬೆಳ್ಳಿಯ ಹೂವುಗಳು,
ಚಂದ ಸುಂದರ ಮರಗಳು,
ನಿಶಬ್ದದ ವಾತಾವರಣ,
ನಿಶಬ್ದದ ಗಾಳಿ

ತಂಪಾಗಿ ಬೀಸುತ್ತಿದೆ,
ತಂಪಾಗಿ ಹೊಳೆಯುತ್ತಿದೆ;
ಗಾಳಿಯ ಶಬ್ದವು
ಹಾಡಿನ ಸ್ವರವಾಗಿದೆ

ತಂಪು ತಂಪು ತಂಪು ಎಲ್ಲಲ್ಲಾ ತಂಪು...



# ಚುರುಕು ಮನಸ್ಸು

ಮೋಡವಿದೆ! ಸೂರ್ಯವಿದೆ!
ಆಟವಾಡುವ ಮನಸ್ಸಿದೆ,
ಕವಿತೆ ಬರೆಯುವ ಆಸೆಯಿದೆ;

ಮರವು ಬೆಳೆದಿದೆ,
ಗಿಡವು ಬೆಳೆಯುತ್ತಿದೆ
ಪಕ್ಷಿಯು ಹಾರುತ್ತಿದೆ ಆಕಾಶದವರೆಗೂ,
ಚಿಟ್ಟೆ ಹಾರುತ್ತಿದೆ ಭೂಮಿಯವರೆಗೂ

ಬೆಳ್ಳಿ, ಕೆಂಪು, ಹರ್ಷಿನದ ಹೂಗಳು,
ಹಸಿರು ಹಸಿರು ಕಾಣಿಸುವ ಮೈದಾನ;
ಮಕ್ಕಳ ಆಟ ನೋಡಲು ಚೆಂದ,
ಮಕ್ಕಳ ತುಂಟ ನೋಡಲು ಚೆಂದ

ಸೂರ್ಯನ ಕಿರಣಗಳು ನನ್ನ ಕಣ್ಣಿಗೆ
ಮೂಡಿದೇ ತಂಪು, ಮತ್ತೊಂದು ಕಣ್ಣಿಗೆ
ಬೆಳಗಿನ ಕಾರ್ಯ ನಡೆಯುತ್ತಿದೆ ಇಲ್ಲಿ,
ಬೆಳಗಿನ ಕಾರ್ಯ ಮೂಡಿದೇ ಇಲ್ಲಿ.........



# ಮರ

ಧಟ್ಟವಾಗಿರುವ ಮರ ನೀನು,

ಧಟ್ಟವಾಗಿರುವ ಮರವು ನೀನು;

ನಿನ್ನ ನೆರಳಿನಲ್ಲಿ ಬೆಳೆಯುತ್ತಿರುವೆ ನಾ,

ನಿನ್ನನ್ನು ನೋಡುತ್ತಾ ಬರೆಯುತ್ತಿರುವೆ ನಾ;

ನಿನ್ನ ಸ್ಪರ್ಶವನ್ನು ಅನುಭವಿಸುತ್ತಿರುವೆ ನಾ,

ನಿನ್ನ ಗಾಳಿಯನ್ನು ಅನುಭವಿಸುತ್ತಿರುವೆ ನಾ;

ಶಕ್ತಿಯುಳ್ಳ ದೇಹ ನಿನ್ನದು,

ಸಾವಿರ ಜೀವಿಗಳಿಗೆ ನೆರಳು ನೀಡುವ ದೇಹ ನಿನ್ನದು

ಉದ್ದವಾಗಿರುವೆ ನೀನು,

ನಿನ್ನ ಮೈತುಂಬ ವಿಧವಿಧ ಎಲೆ,

ನಿನ್ನ ಬುಡದಲ್ಲಿ ಚಿಗುರುತಿದೆ ಮತ್ತೊಂದು ಎಲೆ

ಹೂವಿಲ್ಲ, ಹಣ್ಣಿಲ್ಲ ನೋಡಲು ಹಸಿರು ಎಲ್ಲವೂ ಹಸಿರು.

ಸೂರ್ಯನಿದರೆ ನೆರಳು, ಮಳೆಯಿದರೆ ನೆರಳು;

ಚಂದ್ರನಿದರೆ ಶಾಂತಿ ಕೊಡುವೆ,

ಗಾಳಿಯಿದರೆ ತಂಪು ನೀಡುವೆ.

ಓ ಮರವೇ! ಇರುವೆಯೆ ಹೀಗೆ, ಎಂದೆಂದಿಗೂ............



# ಜೆನುಹುಳ

ಗೂಡನ್ನು ಕಟ್ಟುವೆ,
ಜೇನನ್ನು ಕಟ್ಟುವೆ;
ಬೆಸಿಗೆ ಸಮಯದಲ್ಲಿ
ನಿನ್ನನ್ನು ನೋಡುವೆ

ಮಂದಾರ ಗಿಡದಲ್ಲಿ ಜೇನನ್ನು ಕಟ್ಟುವೆ,
ಮಾವಿನ ಮರದಲ್ಲಿ ಜೇನನ್ನು ಕಟ್ಟುವೆ
ನಿನ್ನಿಂದ ಬರುತ್ತದೆ ಸಿಹಿಯಾದ ಜೇನು,
ನಿನ್ನಿಂದ ಬರುತ್ತದೆ ಸುವಾಸನೆಯ ಜೇನು

ನಿನಗೆ ತಿಳಿದರು ಜೇನನ್ನು ಮಾಡುವೆ,
ನಿನಗೆ ತಿಳಿದರು ಸಿಹಿಯನ್ನು ಮಾಡುವೆ
ಸದ್ಧು ಮಾಡುತ್ತಾ ಇರುವೆ, ವನದಲ್ಲಿ
ಆಟವಾಡುತ್ತಾ, ಆಶ್ವಾದಿಸುತ್ತಾ !

ನಿನ್ನನ್ನು ನೋಡಿ ಹೆದರುವೆ, ನಾವು
ಆದರೂ ಕೊಡುವೆ ನಿನ್ನ ಸಿಹಿ!
ನಿನ್ನನ್ನು ಕೊಲ್ಲಲು ಪ್ರಯತ್ನಿಸುವೆ ನಾವು
ಆದರೂ ಕೊಡುವೆ ನಿನ್ನ ಸಿಹಿ!



# ಬೆಟ್ಟ

ಎತ್ತರವಾಗಿರುವೆ ನೀನು!
ಗಟ್ಟಿಯಾಗಿರುವೆ ನೀನು!
ನಿನ್ನಲ್ಲಿ ಕಾಣಿಸುತ್ತಿದೆ ವಿಚಿತ್ರಾಕಾರ,
ಗಣೇಶನಿಗಿದುವ ಮೋಧಕಧಾಕಾರ;

ನಿನ್ನಲ್ಲಿ ಇರುವೆ ಚಿಕ್ಕಚಿಕ್ಕ ಗುಡಿಸಿಲು,
ನಿನ್ನಲ್ಲಿ ಇರುವೆ ಚಿಕ್ಕಚಿಕ್ಕ ದೇವಸ್ಥಾನ;
ನಿನ್ನಲ್ಲಿ ಬೆಳೆಯುತ್ತದೆ ಧಟ್ಟವಾದ ಮರ,
ನಿನ್ನಲ್ಲಿ ಬೆಳೆಯುತ್ತದೆ ಸುಂದರವಾದ ಪುಷ್ಪ

ನಿನ್ನಲ್ಲಿ ಇರುವುದು ಹಾವು, ಕರಡಿ;
ನಿನ್ನಲ್ಲಿ ಬೆಳೆಯುತ್ತದೆ ಆಶ್ವಗಂಧದ ಗಿಡಗಳು;
ನಿನ್ನಲ್ಲಿ ಸಿಗುತ್ತದೆ ವಿದ್ಯೆಯ ಗಿಡಗಳು;
ನಿನ್ನಲ್ಲಿ ಇರುವುದು ವಿಧವಿಧವಾದ ಜೀವಿಗಳು;
ನಿನ್ನ ಎತ್ತರದಲ್ಲಿ ನಾ ಇದ್ದಾರೆ,
ಹುಟ್ಟುವ ಸೂರ್ಯನು ಕಾಣಿಸುತ್ತದೆ,
ಮುಳುಗುವ ಸೂರ್ಯನು ಕಾಣಿಸುತ್ತದೆ.

ಎತ್ತರ ಎತ್ತರ ಎತ್ತರ!



# ಸಮುದ್ರ

ಅಳೆಯಿಂದ ಅಳೆಗಳು ಕೂಡಿತು ಸಮುದ್ರ,
ಅಳೆಯಿಂದ ಅಳೆಗಳು ಮುಡುತ್ತೆ  ಸಮುದ್ರ;
ಉಪ್ಪಿನ ಕಡಲು ನಿನ್ನಲ್ಲಿ, ಸಮುದ್ರ
ಉಪ್ಪು ಸಿಗುತ್ತದೆ ನಿನ್ನಿಂದ; ಸಮುದ್ರ

ಸೂರ್ಯಾಸ್ತ ಸಮಯದಲ್ಲಿ ನಿನ್ನ ಅಳೆಗಳು,
ರಾತ್ರಿ ಸಮಯದಲ್ಲಿ ನಿನ್ನ ಅಳೆಗಳು
ನೋಡಲು ಕಲೆಯಾಗಿರುವುದು
ಅನುಭವಿಸಲು ಕಲೆಯಾಗಿರುವುದು

ಸೂರ್ಯನ ಕಿರಣಗಳಿಂದ ಮಿಂಚುವೆ ನೀನು,
ಚಂದ್ರನ ಹೊಳಪಿನಿಂದ ಹೊಳೆಯುವೆ ನೀನು;
ನಿನ್ನಲ್ಲಿ ಕಳೆದ ಕ್ಷಣ, ಒಂದೊಂದು ನೆನಪು
ಆ ಸುಂದರ ತಂಗಾಳಿಯಿಂದ...




# ಜಲಪಾತ

ಜಲಪಾತದ ದೃಶ್ಯವನ್ನು ನೋಡುತ್ತಿರು ವೆನು,
ಸುಂದರ ಅನುಭವ ಪಡೆಯುತ್ತಿರು ವೆನು.
ಸೂರ್ಯನ ಕಿರಣಗಳು ನೀರಿನ ಮೇಲೆ,
ಸೂರ್ಯನ ಬೆಳಗು ಮುಖದ ಮೇಲೆ.

ಎತ್ತರದಿಂದ ಬೀಳುವ ಜಲಪಾತವಿದು,
ಕಲ್ಲಿನ ಮೇಲೆ ಬೀಳುವ ಜಲಪಾತವಿದು.
ಬೆಟ್ಟದ ಮಧ್ಯದಲ್ಲಿ,
ವನದ ಮಧ್ಯದಲ್ಲಿ.
ನಿಶಬ್ದ ವಾತಾವರಣದಲ್ಲಿ
ಪಕ್ಷಿಗಳ ಚಿಲಿಪಿಲಿ ಧ್ವನಿಯಲ್ಲಿ
ಜುಳು ಜುಳು ಎನ್ನುವ ಶಬ್ದವಿದು.

ಸುಂದರವಾದ ಜಲಪಾತವಿದು,
ಮನಸ್ಸನ್ನು ಸ್ವಚ್ಛಗೊಳಿಸುವ ಜಲಪಾತವಿದು,
ಮನಸ್ಸನ್ನು ಕಾಂತಿಗೊಳಿಸುವ ಜಲಪಾತವಿದು.
ತಂಪಾದ ಪಾನಿಯಲ್ಲಿ ತೇಲುತ್ತ,
ತಂಪಾದ ಪಾನಿಯನ್ನು ಸೇವಿಸುತ್ತ
ನಾನು ಎಂದೆಂದಿಗೂ!....


12
3
6
9

# ಸಮಯ

ಪ್ರತಿಯೊಂದು ಸಮಯ,
ಪ್ರತಿಯೊಂದು ದಿನ,
ಪ್ರತಿಯೊಂದು ಕ್ಷಣ
ಕಳೆದು ಹೋಗುವೆಯೇ ಹೀಗೇ?


ಪ್ರತಿಯೊಂದು ತಿಂಗಲು,
ಪ್ರತಿಯೊಂದು ವರ್ಷ
ಕಳೆದು ಹೋಗುವೆಯೇ ಹೀಗೇ?

ಕಳೆದು ಹೋಗುವೆಯೇ ಏಕೆ?

ಪ್ರತಿಯೊಂದು ನೆನಪು,
ಪ್ರತಿಯೊಂದು ಖುಷಿ
ಕಳೆದು ಹೋಗುವೆಯೇ ಹೀಗೇ?
ಕಳೆದು ಹೋಗುವೆಯೇ ಏಕೆ?

ಜೀವನವೇ ಹೀಗೇ ಕಳೆದು ಹೋದರೆ ಹೇಗೆ?
ಪ್ರತಿಯೊಂದು ಕ್ಷಣ ಮುಖ್ಯ,
ಪ್ರತಿಯೊಂದು ದಿನ ಮುಖ್ಯ;

ಕಷ್ಟವೇ ಇರಲಿ,
ನಷ್ಟವೇ ಇರಲಿ,
ಖುಷಿ ಇರಲಿ,
ದುಃಖವೇ ಇರಲಿ.
ಅನುಭವಿಸಲಿ ಎಲ್ಲವನ್ನೂ;
ಕಳೆದು ಹೋದ ಸಮಯ ಮತ್ತೆ
ಬರವುದಿಲ್ಲ.......



# ಹಂಪಿ


ಕೇಳಿಸಿಕೊಳ್ಳಿ! ಈ ಕವಿತೆ ಹಂಪಿಯ ಜನರಿಗಾಗಿ, ಅಲ್ಲಿರುವ ಪರಿಸರ ಪ್ರೇಮಿಗಳಿಗಾಗಿ!

ರಾಜರು ನಿರ್ಮಿಸಿರುವ ಹಂಪಿ ಇದು,
ಪುಣ್ಯಭೂಮಿಯ ಹಂಪಿ ಇದು;
ಶಿಲೆಗಳ ಕೆತ್ತನೆಯ ಚೈತನ್ಯವಿದು,
ಕಲೆಗಳ ಸಾರದ ನೈಪುಣ್ಯತೆಯಿದು

ಬಾಳೆ ಗಿಡದ ತೋಟಗಳಿಲ್ಲಿ,
ಅಡಿಕೆ ಎಲೆಗಳ ತೋಟಗಳಿಲ್ಲಿ,
ವಿಚಿತ್ರ ಆಕಾರದ ಕಲ್ಲುಗಳಿಲ್ಲಿ,
ಚಿಕ್ಕ ಚಿಕ್ಕ ನದಿಗಳ ಕಲೆಯಲ್ಲಿ,

ದಟ್ಟವಾಗಿರುವ ಮರಗಳಿಲ್ಲಿ,
ಕಪಿಗಳ-ಪಕ್ಷಿಗಳ ಮನೆಗಳಿಲ್ಲಿ;
ವರ್ಷಗಳ ಹಿಂದೆ ತಪಸ್ವಿಗಳ ಜಾಗವಿದು,
ವರ್ಷಗಳ ಹಿಂದೆ ಋಷಿಗಳ ಗೀತೆಯಿದು
ಸೂರ್ಯನು ಹುಟ್ಟುವ ಜಾಗವಿದು,
ಸೂರ್ಯನು ಮುಳುಗುವ ಜಾಗವಿದು,
ಹುಣ್ಣಿಮೆಯ ಜಾಗವಿದು,
ಅಮಾವಾಸ್ಯೆಯ ಜಾಗವಿದು.

ವಿಧವಿಧವಾದ ಹೂವುಗಳಿಲ್ಲಿ,
ಸುಂದರವಾದ ಮೊಳಕೆಗಳಿಲ್ಲಿ,
ಎಲ್ಲರ ಮನಸಲ್ಲಿ ಮೆಚ್ಚುವ ಹಂಪಿ,
ಎಲ್ಲರ ಮನಸಲ್ಲಿ ಖುಷಿ ತುಂಬುವ ಜಾಗವು ಹಂಪಿ.....



# ಕಹಿ

ಸಿಹಿ ಇಲ್ಲದ್ದಿದರು  ಸಿಹಿ ನೀನು!
ರುಚಿ ಇಲ್ಲದ್ದಿದರು  ರುಚಿ ನೀನು!
ಬೆವಿನ ಎಲೆಯಂತೆ ಕಹಿ ನೀನು!
ಆದರೂ ನಿನ್ನಲ್ಲಿ ಇರುವುದು ರುಚಿ!

ನಿನ್ನ ಮನಸ್ಸು ಕೊಮಲ,
ನಿನ್ನ ಮಾತು ಕೊಮಲ,
ನಿನ್ನ ರೂಪ ಕಹಿ
ನೀನುಕಹಿ

ಗುಲಾಬಿ ನೋಡಲು ಸುಂದರ,
ಗುಲಾಬಿಯು ಇರುವುದು ಕೊಮಲ
ಅದನ್ನು ತಿನ್ನುವುದು ಕಹಿ,
ಆದರೂ ಅದರಲ್ಲಿ ಇರುವುದು ಸಿಹಿ.

ಕಹಿಯ ಉದ್ದೇಶವನ್ನು ತಿಳಿಯಿರಿ!
ಕಹಿಯ ರುಚಿಯನ್ನು ತಿಳಿಯಿರಿ!   ಎಂದೆಂದಿಗೂ!......